# ಮನದಲ್ಲಿ ಕೋಲಾಹಲ, ಮನೆಯಲ್ಲಿ ಅಲ್ಲೋಲಕಲ್ಲೋಲ

ಮೊದಲೇ ಚಿಂತೆಯ ಭಾರಕ್ಕೆ ಕುಗ್ಗಿಹೋಗಿದ್ದ ಕೇಶವರಿಗೆ ಆಸರೆ ಪಡೆಯಲು ಒಂದು ಹೆಗಲು ಬೇಕಿತ್ತು. ಅರವಿಂದರ ರೂಪದಲ್ಲಿ ಅವರಿಗದು ಗೋಚರಿಸಿತು. ಅನುಭವಿ, ಆತ್ಮೀಯರಾಗಿದ್ದ ಆತನೇ ಸೂಕ್ತವೆಂದು ಅವರಿಗೆ ಕಂಡಿತು, 'ನಿನ್ಹತ್ರ ತುಂಬಾ ಮಾತನಾಡೋದಿದೆ... ಈಗ ಬೇಡ... ಸುಧಾರಿಸಿಕೋ.. ಅನಂತರ ಹೇಳ್ತೀನಿ...' ಎಂದರು. ನಿವೇದಿತಾ ಸೌಜನ್ಯಕ್ಕಾದರೂ ಅವರೊಂದಿಗೆ ಆತ್ಮೀಯವಾಗಿ ಬೆರೆಯುವ ಯತ್ನ ಮಾಡಲಿಲ್ಲ. ಅವಳ ಮನೋಭಾವ ಅರಿಯದ ಜಯಲಕ್ಷ್ಮೀ ಮತ್ತು ಕೃತ್ತಿಕಾ ತಾವೇ ಬಂದು ಮಗು ನಿಧಿಯನ್ನು ಕಂಡು ಕೈಗೆ ಮುಯ್ಯಿ ಇಟ್ಟರು. ಎತ್ತಿ ಮುದ್ದಾಡಿಸಿದರು. ಬಾಯಿ ತುಂಬಾ ಮಾತನಾಡಿದರು.

'ನೀನು ಮದ್ವೆ ಅದ್ಮೇಲೆ ತುಂಬಾ ಬದಲಾಗಿದ್ದೀಯಾ ನಿವೀ... ಹೆಚ್ಚು ಮಾತೇ ಆಡಲ್ಲ ನೀನು...' ಎಂದು ಹುಸಿಮುನಿಸು ತೋರಿಸಿದಳು ಕೃತ್ತಿಕಾ. ಅದಕ್ಕೂ ನಿವೇದಿತಾಳ ನೀರಸ ನಗುವೇ ಉತ್ತರವಾಯಿತು. ಮಗಳ ದುಡುಕು ವರ್ತನೆ, ಎಲ್ಲಿ ಪರಿಸ್ಥಿತಿ ಹದಗೆಡಿಸುವುದೋ ಎಂದು ಎಚ್ಚರವಹಿಸಲು ವೀಣಾ ಸ್ವತಃ ಕೆಲಸ ಬಿಟ್ಟು ಅವರೊಂದಿಗೆ ಬಂದು ಕುಳಿತಿದ್ದರು.

ಕೃತ್ತಿಕಾಳ ಮಕ್ಕಳು ಪುಟ್ಟ ನಿಧಿಯನ್ನು ಮಡಿಲಲ್ಲಿ ಕುಳ್ಳಿರಿಸಿ ಸಂಭ್ರಮಿಸಿದರು. ತಾವು ಜೊತೆಗೆ ವಿದೇಶಕ್ಕೆ ಕರೆದೊಯ್ಯುವುದಾಗಿ ಕೇಳಿದಾಗ ಕೃತ್ತಿಕಾ ನಕ್ಕಳು, 'ನಿಮ್ಮಿಬ್ಬರನ್ನೂ ಸಂಭಾಳಿಸಲು ನನ್ಗೆ ಆಗಲ್ಲ... ಇನ್ನು ಇವಳು ಬಂದರೆ... ನಾನು ಜಿಮ್‌ಗೆ ಹೋಗಬೇಕಾಗಿಯೇ ಇಲ್ಲ...' ಎಲ್ಲರೂ ಅವಳ ಮಾತಿಗೆ ನಕ್ಕರೂ ನಿವೇದಿತಾ ಅದಾವುದೋ ಗುಂಗಿನಲ್ಲಿದ್ದಂತೆ ಕಂಡು ಬಂದಳು. ಕೃತ್ತಿಕಾ ಸಂಜೆ ಹೊರಗೆ ತಿರುಗಾಡುವ ಯೋಜನೆ ಹಾಕಿದ್ದಳು. ನಿವೇದಿತಾಳನ್ನು ತಮ್ಮೊಂದಿಗೆ ಕರೆದೊಯ್ಯಲು ಒತ್ತಾಯಿಸಿದಾಗ ಆಕೆ ಸ್ಪಷ್ಟವಾಗಿ ನಿರಾಕರಿಸಿದಳು.

'ನಾನೆಲ್ಲೂ ಬರಲ್ಲ... ನನಗೆ ಆಸಕ್ತಿ ಇಲ್ಲ... ಈ ಪುಟ್ಟ ನಿಧಿಯನ್ನು ಎತ್ತಿಕೊಂಡು ಅದು ಆಗೋದೂ ಇಲ್ಲ... ನೀವೆಲ್ಲಾ ಹೋಗಿ ಬನ್ನಿ...' ಎಂದು ನಿರಾಕರಿಸಿದಳು. ಅವಳು ಹೇಳಿದ ಕಾರಣಕ್ಕಿಂತಲೂ ಅವಳ ನಿರಾಸಕ್ತಿಯೇ ನಿಜವಾದ ಕಾರಣವೆಂದು ಸ್ಪಷ್ಟವಾಗಿ ಅವರಿಗೆ ಅರ್ಥವಾಗಿತ್ತು.

'ಮದ್ವೆ ಆದ್ಮೇಲೆ ನಿವೀ ಆಸಕ್ತಿ, ಉತ್ಸಾಹ ಪೂರ್ತಿ ಇಳಿದುಹೋಗಿದೆ... ಒಂದು ಮಗುವಾಗುವಾಗಲೇ ಹೀಗೆ... ಮುಂದೆ ಇನ್ನೊಂದಾದರೆ ಏನು ಅವಸ್ಥೆ? ನಮ್ಮ ಕೃತ್ತಿಕಾ ಅವ್ಳಿ ಜವ್ಳಿ ಹೇಗೆ ಸಂಭಾಳಿಸಿರಬೇಕು ಹೇಳು? ಮದ್ವೆ ಆದ್ಮೇಲೆ ಹುರುಪೇ ಇಲ್ಲ. ಜೀವನದ ಮೇಲೆ ಆಸಕ್ತಿ ಕಳ್ಕೊಂಡವ್ಳ ಥರ ವರ್ತಿಸ್ತಾಳೆ. ಅವ್ಳು ಮುಂಚಿನಿಂದಲೂ ಸ್ವಲ್ಪ ಗಂಭೀರ ಸ್ವಭಾವದವಳು ಹೌದು. ಆದರೆ ಮದ್ವೆ ಆದ್ಮೇಲೆ ಬದಲಾಗ್ತಾಳೆ ಅಂತ ಅಂದ್ಕೊಂಡಿದ್ದೆ... ಆದ್ರೆ... ಈಗ ಇನ್ನೂ ಜಾಸ್ತಿ ಗಂಭೀರಳಾಗಿದ್ದಾಳೆ. ಯಾಕೋ.. ಏನೋ?' ಎಂದವರು, ವೀಣಾರ ಕಡೆ ತಿರುಗಿ,

'ಅತ್ತಿಗೆ... ನಿವೀ ಅವ್ಳ ಗಂಡನ ಮನೇಲಿ ಚೆನ್ನಾಗಿದ್ದಾಳೆ ತಾನೇ?' ಎಂದು ಕುತೂಹಲದಿಂದ ಪ್ರಶ್ನಿಸಿದರು.

'ಹ್ಞೂಂ ಅತ್ತಿಗೆ... ಅವ್ಳಿಗೇನು? ಅಲ್ಲಿ ರಾಣಿ ಥರ ಇದ್ದಾಳೆ.. ಅವ್ಳ ಸ್ವಭಾವ ನಿನ್ಗೆ ಗೊತ್ತೇ ಇದ್ಯಲ್ವಾ ಅತ್ತಿಗೆ... ಸ್ವಲ್ಪ ಮಿತಭಾಷಿ ಆಕೆ..'. ತನ್ನ ಕುರಿತ ಚರ್ಚೆ ಆದರೂ ಇದು ತನಗಾವುದೂ ಸಂಬಂಧಿಸಿದ್ದೇ ಅಲ್ಲವೆನ್ನುವಂತಿದ್ದಳು ನಿವೇದಿತಾ. ಅವಳ ಗಮನವೆಲ್ಲಾ ಮಕ್ಕಳ ಮಡಿಲಲ್ಲಿ ಆಡುತ್ತಿದ್ದ ನಿಧಿಯ ಮೇಲಿತ್ತು.

ಅವರೆಲ್ಲಾ ಹೊರ ಹೋಗಲು ತಯಾರಾಗಲು ಹೊರಟಾಗ ನಿವೇದಿತಾ ತಂದೆಯನ್ನು ತಡೆದಳು, 'ಪಪ್ಪ... ನಾನು ಪ್ರದೀಪ್ ಮನೆಗೆ ಹೋಗ್ತೀನಿ... ನಾನಿಲ್ಲಿರಲ್ಲ...'

ಮಗಳ ಮಾತು ಕೇಳಿ ಕೇಶವರಿಗೆ ಅಚ್ಚರಿಯಾಯಿತು, 'ಇಷ್ಟು ಹೊತ್ತು ಸರಿಯಾಗೇ ಇದ್ದೆ... ಇದ್ದಕ್ಕಿದ್ದಂತೆ ಏನಾಯಿತು? ಯಾಕೆ ಹೀಗಾಡ್ತಿದ್ದೀ ನಿವೀ..?' ನಿವೇದಿತಾ ನಿಂತಲ್ಲೇ ಚಡಪಡಿಸಿದಳೇ ಹೊರತು ಏನೂ ಬಾಯಿಬಿಡಲಿಲ್ಲ.

'ಇರು ನಿವೀ... ಆತುರಪಡಬೇಡ... ಹೇಗೂ ಅರವಿಂದ ಭಾವ ಇದ್ದಾರೆ... ಅವ್ರನ್ನು ನಾಳೆನೂ ಇಲ್ಲೇ ನಿಲ್ಲಿಸೋಣ. ಪ್ರದೀಪನ ಹತ್ರ ಮಾತನಾಡೋದಿಕ್ಕೆ ಕರ್ಕೊಂಡು ಹೋಗೋಣಾ ಅಂತ ಇದ್ದೇನೆ...' ತಮ್ಮ ಮನದ ಅನಿಸಿಕೆಯನ್ನು ಹೊರಗೆಡವಿದರು. 'ನಮ್ಗೆ ಮಾತನಾಡಲು ಮುಜುಗರ... ಯಾರಾದ್ರೂ ಹಿರಿಯರು, ವಿವೇಚನೆಯುಳ್ಳವರು... ಮೂರನೇ ವ್ಯಕ್ತಿ ಸಂಧಾನ ಮಾಡಿದರೆ ಸರಿ ಹೋಗುತ್ತೆ.'

ತಂದೆಯ ಮಾತುಗಳನ್ನಾಲಿಸುತ್ತಲೇ ನಿವೇದಿತಾ ಮತ್ತಷ್ಟು ವ್ಯಗ್ರಳಾದಳು, 'ಪ್ರದೀಪನ ಹತ್ರ ಅವರನ್ನು ಯಾಕೆ ಕರೆದುಕೊಂಡು ಹೋಗೋದು? ಅಷ್ಟಕ್ಕೂ ಸಮಾಧಾನ ಮಾಡುವ ಅಗತ್ಯ ಏನಿದೆ? ಅವ್ರು ಯಾರು ನನ್ನ ಬದುಕಿನ ಬಗ್ಗೆ ನಿರ್ಧಾರ ಮಾಡಲು...?'

ಕೇಶವರು ದಿಗ್ಭ್ರಾಂತರಾದರು. ನಿವೇದಿತಾ ಎಂದೂ ಹೀಗೆ ಎದುರಾಗಿ ಮಾತನಾಡಿದವಳಲ್ಲ, ಹಿರಿಯರಿಗೆ ಅನಾದರ ತೋರಿಸಿದವಳಲ್ಲ.

'ಯಾಕಮ್ಮಾ? ಏನಾಗಿದೆ ನಿನ್ಗೆ? ಪ್ರದೀಪ ಹೇಳದೇ ಕೇಳದೇ

